4.	GULBARGA						
16	Gulbarga	—	—	2	0 300	—	—
17	Raichur	—	—	19	1.650	—	—
18	Bellary	—	—	—	—	—	—
19	Bidar	—	—	—	—	—	—
	Total IV	—	—	21	1.950	—	—
STATE TOTAL		15	0·983	35	3.025	—	—

ಬೈಲಹೊಂಗಲ ನಗರದಲ್ಲಿ ಕುಡಿಯುವ ನೀರಿನ ಬಗ್ಗೆ

೭೫೬. ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಲಹೊಂಗಲ ನಗರದಲ್ಲಿನ ವಿಸ್ತರಣಾ ಪ್ರದೇಶದಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅದನ್ನು ನಿವಾರಿಸಲು ಸರ್ಕಾರದವರು ಯಾವ ಕ್ರಮ ಕೈಗೊಡಿರುವರು ?

ಇ) ಬೈಲಹೊಂಗಲ ನಗರ ನೀರು ಸರಬರಾಜಿಗಾಗಿ ಪರಿವರ್ತಿತ ವಿತರಣಾ ಜಾಲ, ಭೂಮಟ್ಟದ ಜಲಾಶಯ ಮತ್ತು ಮೇಲ್ಮಟ್ಟದ ಜಲ ಸಂಗ್ರಹಗಳನ್ನು ಉತ್ತಮಪಡಿಸುವ ಉದ್ದೇಶದಿಂದ ೩೨.೦೦ ಲಕ್ಷ ರೂ.ಗಳ ಅಂದಾಜನ್ನು ಧಾರವಾಡ ವೃತ್ತದ ಮುಖ್ಯ ಅಭಿಯಂತರರಿಗೆ ಕಳುಹಿಸಿದ್ದು ಅದು ಯಾವ ಹಂತದಲ್ಲಿ ಇದೆ ?

ಈ) ಅದನ್ನು ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ೩೨.೦೦ ಲಕ್ಷ ರೂ. ಗಳ ಒಂದು ಅಂದಾಜನ್ನು ತಯಾರಿಸಲಾಗಿದೆ.

ಇ) ಹಣಕಾಸಿನ ವ್ಯವಸ್ಥೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ೧೯೮೬-೮೭ನೇ ಸಾಲಿನಲ್ಲಿ ಹಣ ಒದಗಿಸಿರುವುದಿಲ್ಲ. ಮುಂದಿನ ವರ್ಷದಲ್ಲಿ ಹಣದ ಪರಿಸ್ಥಿತಿ ನೋಡಿಕೊಂಡು ಪರಿಶೀಲಿಸಲಾಗುವುದು.

ಕುಂದಾಪುರ ತಾಲ್ಲೂಕಿನಲ್ಲಿರುವ ಗ್ರಾಮಸೇವಕರ ಬಗ್ಗೆ

೧೦೦೨. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದಲ್ಲಿರುವ ಗ್ರಾಮಸೇವಕರೆಷ್ಟು ?

ಆ) ಪ್ರತಿ ಗ್ರಾಮಗಳಿಗೂ ಗ್ರಾಮ ಸೇವಕರನ್ನು ನೇಮಿಸಲಾಗುವುದೇ ?

ಇ) ಸದರೀ ಕ್ಷೇತ್ರದಲ್ಲಿ ಕೊರತೆ ಇರುವ ಗ್ರಾಮ ಸೇವಕರ ಹುದ್ದೆಗಳೆಷ್ಟು ?